ಎಷ್ಟೆಷ್ಟು ಕೆರೆಗಳು ಇದ್ದಾವೆಂದು ಕೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 107 ಕೆರೆಗಳು. ಹಾವೇರಿ ಜಿಲ್ಲೆಯಲ್ಲಿ 261 ಕೆರೆಗಳು. ಗದಗ್ ಜಿಲ್ಲೆಯಲ್ಲಿ 22 ಕೆರೆಗಳು. ಇವತ್ತು ಈ ಕೆರೆಗಳಲ್ಲಿ ಹೂಳು ತೆಗೆದಿದ್ದಕ್ಕೆ ಎಷ್ಟೆಷ್ಟು ಖರ್ಚು ಆಗಿದೆ ಎಂದು ಕೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 4 ಕೆರೆಗಳಿಗೆ 8 ಲಕ್ಷದ 45 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ. ಹಾವೇರಿ ಜಿಲ್ಲೆಯಲ್ಲಿ ಎರಡು ಕೆರೆಗಳಿಗೆ 3.42 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಗದಗ್ ಜಿಲ್ಲೆಯಲ್ಲಿ ಎರಡು ಕೆರೆ ಹೂಳು ತೆಗೆದಿದ್ದೇವೆ. ಅದಕ್ಕೆ 1.32 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಇದೇ ತರಹ ಪ್ರತಿ ಒಂದು ಕೆರೆಯ ಹೆಸರು ಮತ್ತು ಅದಕ್ಕೆ ಖರ್ಚು ಮಾಡಿದ ವಿವರ ಬೇಕಾಗಿತ್ತು. ಅದರ ಬಗ್ಗೆ ಮಾಹಿತಿ ಕೊಡಿ ಎಂದು ನಾನು ಮುಂಧುವರಿದು ಪ್ರಶ್ನೆ ಹಾಕಿದ್ದೆ. ಅದನ್ನು ನಿಮ್ಮ ಪಿಎಸ್‌ಗೆ ಹೇಳಿದ್ದೆ.

ಅಧ್ಯಕ್ಷರು :— ವಿವರ ಕಳುಹಿಸಿಕೊಡುತ್ತಾರೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಈಗ ಹೊಸ ಕೆರೆಗಳ ಬೇಡಿಕೆ ಇದೆ. ಹೊಸ ಕೆರೆಗಳ ಬೇಡಿಕೆ ಪ್ರತಿ ಒಂದು ಜಿಲ್ಲೆಯಲ್ಲಿ ಎಷ್ಟು ಇದೆ ಅದರ ಮಾಹಿತಿ ಕೊಡಿ ಎಂದು ಕೇಳಿದ್ದೆ. ದಯವಿಟ್ಟು ಅದನ್ನು ತರಿಸಿಕೊಡಿ.

ಅಧ್ಯಕ್ಷರು :— ತರಿಸಿಕೊಡುತ್ತಾರೆ.

ಶ್ರೀ ಶಿವಾನಂದ ನಾಯಕ್ :— 1757ನೇ ಪ್ರಶ್ನೆಯನ್ನು ಸಣ್ಣ ನೀರಾವರಿ ಮಂತ್ರಿಗಳಲ್ಲಿ ಕೇಳುತ್ತೇನೆ.

ಅಧ್ಯಕ್ಷರು :— ನಿಮ್ಮದು ಉಪ ಪ್ರಶ್ನೆ ಇದೆ ಎಂದು ತಿಳಿದುಕೊಂಡಿದ್ದೆ. ನಿಮ್ಮ ಪ್ರಶ್ನೆ ಎಲ್ಲಿದೆ? ನೀವು ಸ್ವಲ್ಪ ಕಾಯಿರಿ. ನಾವು ಪಟ್ಟಿ ಪ್ರಕಾರ ಹೋಗಬೇಕು.

ವಿಜಾಪುರದ ಕಾರಾಗೃಹದಲ್ಲಿರುವ ಅಜೀವ ಶಿಕ್ಷೆಗೊಳಗಾದ ಖೈದಿಗಳು.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ (ವಿಜಾಪುರ) :— ಮಾನ್ಯ ಬಂದೀಖಾನೆ, ಗೃಹರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ವಿಜಾಪುರ ಜಿಲ್ಲಾ ಕಾರಾಗೃಹದಲ್ಲಿರುವ ಅಜೀವ ಶಿಕ್ಷೆಗೊಳಗಾದ ಖೈದಿಗಳ ಸಂಖ್ಯೆ ಎಷ್ಟು?

ಆ) ಅಲ್ಲಿನ ಖೈದಿಗಳಿಗೆ ನೀಡುತ್ತಿರುವ ಸೌಲಭ್ಯಗಳು ಸಮರ್ಪಕವಾಗಿವೆಯೇ?

ಇ) ಜಿಲ್ಲಾ ಕಾರಾಗೃಹ ಸುಧಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ (ಬಂದೀಖಾನೆ, ಗೃಹರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :—

ಅ) ವಿಜಾಪುರ ಕೇಂದ್ರ ಕಾರಾಗೃಹದಲ್ಲಿ ದಿನಾಂಕ 30-6-1999ಕ್ಕೆ ಇದ್ದಂತೆ 72 ಪುರುಷರು ಮತ್ತು ಇಬ್ಬರು ಮಹಿಳಾ ಖೈದಿಗಳು ಅಜೀವ ಶಿಕ್ಷೆಗೊಳಪಟ್ಟವರಾಗಿದ್ದಾರೆ.

ಆ) ಹೌದು

ಇ) ಭದ್ರತೆಯನ್ನು ಹೆಚ್ಚಿಸಲು ಡೀಸೆಲ್ ಜನರೇಟರ್ ಸೆಟ್ ಮತ್ತು ಬೈನಾಕ್ಯುಲರ್ ಗಳನ್ನು ಒದಗಿಸಲಾಗಿದೆ. ಬಂದಿಗಳ ಮನರಂಜನೆಗಾಗಿ ಎಲ್ಲ ಕೊಠಡಿಗಳಲ್ಲಿ ದೂರದರ್ಶನಗಳನ್ನು ಒದಗಿಸಲಾಗಿದೆ. ಖೈದಿಗಳ ವೃತ್ತಿ ತರಬೇತಿಗಾಗಿ ನೇಯ್ಗೆ, ವ್ಯವಸಾಯ ಮತ್ತು ಮರಗೆಲಸಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಮಹಿಳಾ ಬಂಧಿಗಳಿಗೆ ಹೊಲಿಗೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರತಿ ಕೊಠಡಿಗೆ ಫ್ಯಾನಿನ ವ್ಯವಸ್ಥೆ ಇದೆ. ಬಿಸಿನೀರಿಗಾಗಿ ಸೋಲಾರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಆಹಾರ ಸಾಮಗ್ರಿಗಳನ್ನು ಕೊಳ್ಳುವ ಮತ್ತು ವಿತರಿಸುವ ವ್ಯವಸ್ಥೆಯನ್ನು ಉತ್ತಮಪಡಿಸಿದ್ದು ಖೈದಿಗಳಿಗೆ ಯೋಗ್ಯ ಆಹಾರ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ. ಸ್ಥಳೀಯ ಸಂಸ್ಥೆಗಳ ಸಹಾಯದಿಂದ ಆಗಾಗ್ಗೆ ಖೈದಿಗಳ ಆರೋಗ್ಯ ತಪಾಸಣೆ ನಡೆಸುತ್ತಿದ್ದು ಅವರು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಕಡೆಗೆ ಗಮನ ಹರಿಸಲಾಗಿದೆ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಕೊಟ್ಟಂತಹ ಉತ್ತರ ನೋಡಿದರೆ ಬಹುಶಃ ಜೈಲು ಮತ್ತು ಪಂಚತಾರಾ ಹೋಟೆಲ್‌ನಷ್ಟು ಒಳ್ಳೆಯದು ಇದೆ ಎಂಬ ಅರ್ಥ ಬರುತ್ತಿದೆ. ಆ ರೀತಿಯಲ್ಲಿ ಅವರು ಉತ್ತರ ಕೊಟ್ಟಿದ್ದಾರೆ. ಸರ್ಕಾರ ಹತ್ತು ವರ್ಷಗಳಿಗಿಂತ ಹೆಚ್ಚಿನ ಜೀವಾವಧಿ ಶಿಕ್ಷೆಗೆ ಒಳಗಾದಂತಹ ಖೈದಿಗಳಿಗೆ ವಿಶೇಷ ಪ್ರಸಂಗಗಳಲ್ಲಿ ಅಂದರೆ ಆಗಸ್ಟ್ 15, ಜನವರಿ 26 ಈ ರೀತಿಯ ಸಂದರ್ಭಗಳಲ್ಲಿ ಅವರ ನಡತೆಯಲ್ಲಿ ಬದಲಾವಣೆಯನ್ನು ಕಂಡು ಬಿಡುಗಡೆ ಮಾಡುವಂತಹ ಒಂದು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯಾ? ಇದೊಂದು ಪ್ರಶ್ನೆ.

ಎರಡನೆಯದಾಗಿ, ಬಿಜಾಪುರ ಕಾರಾಗೃಹದಿಂದ ಒಬ್ಬ ಖೈದಿ ಆರೋಗ್ಯದ ನೆಪದಲ್ಲಿ ಹೊರಗಡೆ ಓಡಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದರೆ, ಅವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

(ಈ ಹಂತದಲ್ಲಿ ಮಾತನಾಡಲು ಮಾನ್ಯ ಸದಸ್ಯರಾದ ಶ್ರೀ ಯೋಗೀಶ್ ಭಟ್‌ರವರು ಎದ್ದು ನಿಂತರು)

ಅಧ್ಯಕ್ಷರು :— ತಾವು ಮಾತನಾಡಲು ಎದ್ದು ನಿಂತಿರಲ್ಲಾ, ಬಿಜಾಪುರದ ಜೈಲಿಗೂ ಮಂಗಳೂರಿನ ಜೈಲಿಗೂ ಏನು ಸಂಬಂಧವಿದೆ?

ಶ್ರೀ ಎನ್. ಯೋಗೀಶ್ ಭಟ್ :— ಈಗ ರಾಜ್ಯದ ಎಲ್ಲಾ ಜೈಲುಗಳಿಗೂ ಕನೆಕ್ಷನ್ ಬರುತ್ತಿದೆ. ಮಾನ್ಯ ಸಚಿವರು ಯಾವ ಜೈಲುಗಳಿಗೂ ಭೇಟಿ ಕೊಡುತ್ತಿಲ್ಲ. ಇದು ನಮ್ಮ ನೇರವಾದ ಆರೋಪ. ಐ.ಜಿ.ಪಿ. ಮಟ್ಟದ ಅಧಿಕಾರಿಗಳೂ ಸಹ ಭೇಟಿ ಕೊಡುತ್ತಿಲ್ಲ. ಅವರನ್ನೇಕೆ ಸಚಿವರನ್ನಾಗಿ ಮಾಡಿದ್ದಾರೆ?

ಅಧ್ಯಕ್ಷರು :— ಅವರು ಒಳ್ಳೆಯ ಜನರಾಗಿದ್ದು, ನಾನು ಅವರನ್ನು ಜೈಲಿಗೆ ಕಳುಹಿಸುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಸಚಿವರು ರಾಜ್ಯಾದ್ಯಂತ ಪ್ರವಾಸ ಮಾಡಿ ಎಲ್ಲಾ ಜೈಲುಗಳಿಗೂ ಭೇಟಿ ಕೊಟ್ಟು ಒಂದು ದಿವಸ ಅಲ್ಲಿಯೇ ಇದ್ದು, ಅಲ್ಲಿನ ವಿಚಾರಗಳನ್ನು ತಿಳಿದುಕೊಂಡು ಆ ಜೈಲುಗಳನ್ನು ಸುಧಾರಣೆ ಮಾಡಲು ಕ್ರಮ ಕೈಗೊಳ್ಳಬೇಕೆಂಬುದೇ ಮಾನ್ಯ ಸದಸ್ಯರ ಅಪೇಕ್ಷೆಯಾಗಿದೆ.

ಅಧ್ಯಕ್ಷರು :— ಪಾಪ, ಜೈಲಿಗೆ ಹೋಗಬೇಕಿರುವುದು ಅವರಲ್ಲ; ಬಹಳ ಜನರಿದ್ದಾರೆ. ಅವರ ಬಗ್ಗೆ ಮೊದಲು ಯೋಚಿಸೋಣ. ಅನಂತರ, ಇವರ ಸರದಿ ಬಂದಾಗ ನೋಡೋಣ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಮಾನ್ಯ ಅಧ್ಯಕ್ಷರೆ, ನಾನು ಈ ಹಿಂದೆ ಸುಮಾರು ಹದಿನೈದು ದಿವಸಗಳ ಕಾಲ ಜೈಲಿಗೆ ಹೋಗಿ ಬಂದಿದ್ದೇನೆ. ಆದರೆ, ಜೈಲುಗಳಲ್ಲಿ ಇವೊತ್ತಿರುವ ಸೌಲಭ್ಯಗಳು ಅವೊತ್ತು ಇರಲಿಲ್ಲ. ನನ್ನ ಮೂರನೇ ಪ್ರಶ್ನೆಯೇನೆಂದರೆ, ಮೂರ್ನಾಲ್ಕು ವರ್ಷಗಳ ಹಿಂದೆ ಜೈಲಿಗೆ ಅಕ್ರಮ ರೀತಿಯಲ್ಲಿ ಹೊರಗಿನಿಂದ ಪೂರೈಸಲಾದ ವಿಷ ಬೆರೆಸಿದ ಮದ್ಯ ಸೇವಿಸಿ ಒಬ್ಬ ಖೈದಿ ಕೊಲೆಯಾಗಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ? ಗೊತ್ತಿದ್ದರೆ, ಸಂಬಂಧಪಟ್ಟವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದಕ್ಕೆ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ :— ಮಾನ್ಯ ಅಧ್ಯಕ್ಷರೆ, ಜೈಲಿನಲ್ಲಿರುವ ಖೈದಿಗಳ ನಡತೆಯಲ್ಲಿ ಏನಾದರೂ ಬದಲಾವಣೆಯಾಗಿದ್ದರೆ ಅವರನ್ನು ಬಿಡುಗಡೆಗೊಳಿಸುವುದಕ್ಕೆ ಸರ್ಕಾರ ಆಲೋಚಿಸಿದೆಯೇ? ಎಂದು ಮಾನ್ಯ ಸದಸ್ಯರು ಕೇಳಿರುವುದಕ್ಕೆ ಉತ್ತರಿಸುವುದಾದರೆ, ಈ ಹಿಂದೆ ಬಂಧೀಖಾನೆ ಸಚಿವರಾಗಿದ್ದವರು ಬಂಧಿಯಾಗಿದ್ದ ಕೈದಿಗಳ ನಡತೆಯಲ್ಲಿ ಬದಲಾವಣೆ ಕಂಡು ಬಂದಿದ್ದವರನ್ನು ಬಿಡುಗಡೆಗೊಳಿಸಿದ್ದಾರೆ. ಈಗ ಅಂತಹ ಕೈದಿಗಳನ್ನು ಬಿಡುಗಡೆಗೊಳಿಸುವಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ಸರ್ಕಾರ ವಿಚಾರ ಮಾಡಿಲ್ಲ. ನಡತೆಯಲ್ಲಿ

ಉತ್ತಮ ಬದಲಾವಣೆ ಕಂಡು ಬಂದ ನಿರ್ದಿಷ್ಟ ಪ್ರಕರಣಗಳಿದ್ದರೆ, ಆ ಕುರಿತು ಪರಿಶೀಲನೆ ಮಾಡಿ ಅಂತಹ ಕೈದಿಗಳನ್ನು ಬಿಡುಗಡೆಗೊಳಿಸಲು ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಅಂತಹ ಕಾರಾಗೃಹಗಳಿಗೆ ಸನ್ಮಾನ್ಯ ಬಂಧಿಖಾನೆ ಸಚಿವರು ಎಷ್ಟು ಸಲ ಭೇಟಿ ಕೊಟ್ಟಿದ್ದಾರೆಂದು ಹೇಳಬೇಕು.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ :— ನಾನು ಈಗಾಗಲೇ ಗುಲ್ಬರ್ಗ, ಧಾರವಾಡ ಮತ್ತು ಶಿವಮೊಗ್ಗದಲ್ಲಿರುವ ಕೇಂದ್ರ ಕಾರಾಗೃಹಗಳಿಗೆ ಭೇಟಿ ಕೊಟ್ಟಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಸಮಸ್ಯೆ ಇರುವಂಥ ಯಾವುದೇ ಜೈಲುಗಳಿಗೂ ಮಾನ್ಯ ಬಂಧಿಖಾನೆ ಸಚಿವರು ಭೇಟಿ ಕೊಡುತ್ತಿಲ್ಲ.

ಅಧ್ಯಕ್ಷರು :— ಮಾನ್ಯ ಶಿವಣ್ಣನವರೆ, ಇವರು ಯಾರು ಏನೇ ಹೇಳಲಿ, ಮೊದಲು ನಿಮ್ಮ ಮತಕ್ಷೇತ್ರ ನೋಡಿಕೊಳ್ಳಿ. ಯಾವ ಜೈಲಿಗೂ ನೀವು ಹೋಗುವುದು ಬೇಡ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂಥ ಉಪ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಮೂರ್ನಾಲ್ಕು ವರ್ಷಗಳ ಹಿಂದೆ ಬಿಜಾಪುರ ಜಿಲ್ಲೆಯ ಕಾರಾಗೃಹದಲ್ಲಿದ್ದ ಒಬ್ಬ ಕುಖ್ಯಾತ ಕೊಲೆಗಡುಕನನ್ನು ಆರೋಗ್ಯದ ನೆಪದಲ್ಲಿ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಆತ ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗಿರುವ ಪ್ರಸಂಗದ ಬಗ್ಗೆ ತಾವು ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ ಹಾಗೂ ಇಲ್ಲಿಯವರೆಗೆ ಯಾವ್ಯಾವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆಯೆಂದು ಹೇಳಬೇಕು.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ :— ಸದ್ಯಕ್ಕೆ ನನ್ನ ಬಳಿ ಆ ಕುರಿತು ಮಾಹಿತಿ ಇಲ್ಲದಿರುವುದರಿಂದ ಅನಂತರ ತರಿಸಿಕೊಡುತ್ತೇನೆ.

ಅಧ್ಯಕ್ಷರು :— ತಾವು ನೋಟೀಸ್ ಕಳುಹಿಸಿಕೊಡಿ, ಮಾನ್ಯ ಸಚಿವರು ಮಾಹಿತಿ ತರಿಸಿಕೊಡುತ್ತಾರೆ.

ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 25ನೇ ಪಟ್ಟಿಯಲ್ಲಿರುವ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ 50 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.